ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು – 570017
ದೂರವಾಣಿ ಸಂಖ್ಯೆ: 0821- 2343384

CHAMUNDESHWARI ELECTRICITY
SUPPLY CORPORATION LIMITED
(Government of Karnataka undertaking)
Corporate Office,
CESC, Mysuru-570017
Website: www.cescmysore.org
E-mail ID: agmtax@cescmysore.org

Company Identity Number[CIN]:- U40109KA2004SGC035177

ಕ್ರಮಾಂಕ: ಸೆಸ್ಕ್/ತೆರಿಗೆ/03/10/2021-22/ 415-1486 ದಿನಾಂಕ: 31 DEC 2021
ಲಗತ್ತು:

## ಸುತ್ತೋಲೆ

**ವಿಷಯ:-** ಖರೀದಿ ಆದೇಶ ಹೊರಡಿಸುವ ಹಾಗೂ ಹುಂಡಿ ಪಾವತಿಸುವ ಮೊದಲು ಪರಿಶೀಲಿಸಿ ಪಾಲಿಸಬೇಕಾದ ಕಾರ್ಯವಿಧಾನಗಳ ಬಗ್ಗೆ.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಟೆಂಡರ್ ಪ್ರಕ್ರಿಯೆಯಲ್ಲಿ ಸಾಮಗ್ರಿ ಖರೀದಿಗೆ ಆಯ್ಕೆಯಾದ ಗುತ್ತಿಗೆದಾರ/ ಸರಬರಾಜುದಾರರ ಖರೀದಿ ಆದೇಶವನ್ನು/ ಇತರೆ ಕಾರ್ಯಾದೇಶಗಳನ್ನು ಹೊರಡಿಸುವಾಗ ಮತ್ತು ಸರಬರಾಜುದಾರರ/ಗುತ್ತಿಗೆದಾರರ/ಸೇವಾ ಪೂರೈಕೆದಾರರ ಹುಂಡಿ ಪಾವತಿಸುವ ಮೊದಲು ನಿಗಮದ ಎಲ್ಲಾ ಲೆಕ್ಕಘಟಕಗಳು ತಮ್ಮ ಹಂತದಲ್ಲಿ ಈ ಕೆಳಕಂಡ ಜಿ.ಎಸ್.ಟಿ ಸಂಬಂಧಿತ ಮಾಹಿತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳುವುದು.

1) ಖರೀದಿ/ಕಾರ್ಯ ಆದೇಶ ಪಡೆಯುವ ಸರಬರಾಜುದಾರರು/ಗುತ್ತಿಗೆದಾರರು/ಸೇವಾ ಪೂರೈಕೆದಾರರು ಜಿ.ಎಸ್.ಟಿ ಕಾಯ್ದೆಯ ನಿಯಮಾನುಸಾರ ನೋಂದಣಿಯನ್ನು ಪಡೆದಿರಬೇಕು ಮತ್ತು ನೋಂದಣಿ ಪತ್ರವನ್ನು ಸಲ್ಲಿಸಬೇಕು.

2) ಸರಬರಾಜುದಾರರು/ಗುತ್ತಿಗೆದಾರರು/ಸೇವಾ ಪೂರೈಕೆದಾರರು ಸಲ್ಲಿಸಿರುವ ನೋಂದಣಿ ಸಂಖ್ಯೆಯು ಸರಿ/ ಚಾಲ್ತಿಯಲ್ಲಿರುವ ಬಗ್ಗೆ ಜಿ.ಎಸ್.ಟಿ ಪೋರ್ಟಲ್‌ನಲ್ಲಿ ಪರಿಶೀಲಿಸಿ, ಕ್ರಮವಹಿಸುವುದು. ಖರೀದಿ ಆದೇಶ ಹೊರಡಿಸುವ ಮೊದಲು ಜಿ.ಎಸ್.ಟಿ ಸಂಬಂಧಿತ GSTR-1& GSTR-3B ಹಾಗೂ GSTR-9 ಫೈಲಿಂಗ್ ಮಾಡಿರುವ ಬಗ್ಗೆ ಈ ಕೆಳಗೆ ಸೂಚಿಸಿರುವ ಮಾರ್ಗದಲ್ಲಿ ಖಚಿತಪಡಿಸಿಕೊಳ್ಳುವುದು.

**(www.gst.gov.in →Search Taxpayer→Search by GSTIN/UIN → Show filing Table)**

3) ಎಲ್ಲಾ ಲೆಕ್ಕಘಟಕಗಳು ಖರೀದಿ ಆದೇಶ ಪಡೆದಿರುವ ಸರಬರಾಜುದಾರರು/ಗುತ್ತಿಗೆದಾರರು/ಸೇವಾ ಪೂರೈಕೆದಾರರು (ಸದರಿಯವರ ವಾರ್ಷಿಕ ವಹಿವಾಟು ರೂ.50 ಕೋಟಿಗಿಂತ ಹೆಚ್ಚಾಗಿದ್ದಲ್ಲಿ) ಪಾವತಿಗಾಗಿ ಹುಂಡಿಗಳನ್ನು ಸಲ್ಲಿಸಿದಾಗ ಕಡ್ಡಾಯವಾಗಿ E-invoice ಪ್ರತಿ ಪಡೆದು ಹುಂಡಿ ಪಾವತಿಸುವುದು. ಹಾಗೂ ಎಫ್.ಎ.ಎಂ.ಎಸ್ ತಂತ್ರಾಂಶದಲ್ಲಿ ಹುಂಡಿ ಪಾಸು ಮಾಡುವ ಮೊದಲು Vendor Master ನಲ್ಲಿ PAN ಹಾಗೂ GSTIN ನೋಂದಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

4) ಸರಬರಾಜುದಾರರು/ಗುತ್ತಿಗೆದಾರರು/ಸೇವಾ ಪೂರೈಕೆದಾರರು ಸಲ್ಲಿಸಿರುವ ಹುಂಡಿಗಳ ಫೈಲಿಂಗ್ ಮಾಹಿತಿಯು ನಿಗಮದ ಜಿ.ಎಸ್.ಟಿ.ಆರ್-2Aನ ಮಾಹಿತಿಯನ್ನು ಪ್ರತಿ ಮಾಹೆ ನಿಗಮ ಕಛೇರಿಯ ತೆರಿಗೆ ಶಾಖೆಯಿಂದ ಮಿಂಚಂಚೆ ಮೂಲಕ ಗೂಗಲ್ ಡ್ರೈವ್‌ನಲ್ಲಿ ಎಲ್ಲಾ ಲೆಕ್ಕಘಟಕಗಳಿಗೆ ಒದಗಿಸಲಾಗುವುದು.

ಈ ರೀತಿ ಒದಗಿಸಲಾದ ಮಾಹಿತಿಯನ್ನು ಸದರಿ ಮಾಹೆಯಲ್ಲೇ Download ಮಾಡಿಕೊಳ್ಳುವುದು ಹಾಗೂ ಎಲ್ಲಾ ಜಿ.ಎಸ್.ಟಿ ಹುಂಡಿಗಳಲ್ಲಿ ನಮೂದಿಸಿರುವ ದಿನಾಂಕದ ಮಾಹೆಯ ಜಿ.ಎಸ್.ಟಿ.ಆರ್-2A ಮಾಹಿತಿಯಲ್ಲಿ, ಸದರಿಯವರು ಜಿ.ಎಸ್.ಟಿ.ಆರ್-1 ಫೈಲಿಂಗ್ ಮಾಡಿ ಪ್ರಾಧಿಕಾರಕ್ಕೆ ತೆರಿಗೆ ಪಾವತಿಸಿರುವ ಬಗ್ಗೆ, ಇನ್ವಾಯ್ಸ್ ವಿವರಗಳ ಮಾಹಿತಿಯು ಬಿಂಬಿತವಾಗಿದೆಯೇ ಎಂದು ಖಚಿತಪಡಿಸಿಕೊಳ್ಳುವುದು.

ಇನ್ವಾಯ್ಸ್ ದಿನಾಂಕಗಳನ್ನು ಖಚಿತಪಡಿಸಿಕೊಳ್ಳುವಾಗ ಈ ಕೆಳಗಿನ ಪಟ್ಟಿಯಲ್ಲಿರುವ ಮಾದರಿ ದಿನಾಂಕಗಳನ್ನು ಗಮನದಲ್ಲಿಟ್ಟುಕೊಂಡು ಜಿ.ಎಸ್.ಟಿ.ಆರ್-2A ಮಾಹಿತಿಯನ್ನು ಪರಿಶೀಲಿಸುವುದು.

| Types of Invoice by Suppier/ Service providers | Invoice Date (Date mentioned in Bill submitted) | | Due date | | | Reflected in 2A | GSTR-2A Details available in Google Sheets |
|---|---|---|---|---|---|---|---|
| | | | E-invoice date | GSTR- 1 filing | Payment to Tax & GSTR-3B Filing | | |
| E-Invoice (Trunover >Rs.50Cr) | From | 1-Apr-2021 | 30-Apr-2021 | 11-May-2021 | 20-May-2021 | Apr-21 | May-21 |
| | To | 30-Apr-2021 | | | | | |
| Other than E-Invoices | | | | | | | |
| If Monthly returns filed (> Rs.5Cr Turnover) | From | 1-Apr-2021 | NA | 11-May-2021 | 20-May-2021 | Apr-21 | May-21 |
| | To | 30-Apr-2021 | | | | | |
| If Monthly returns filed (> Rs.5Cr Turnover) | From | 1-Apr-2021 | NA | 11-Jun-2021 | 20-Jun-2021 | May-21 | Jun-21 |
| | To | 30-Apr-2021 | | | | | |
| If Quarterly returns filed (upto Rs. 5Cr Turnover) | From | 1-Apr-2021 | NA | 11-Jul-2021 | 20-May-2021 | Jun-21 | Jul-21 |
| | To | 30-Apr-2021 | | | | | |

[Note:Invoice wise details to be verified in the reflected month of GSTR-2A & if details not available in GSTR2A, filing month of the Invoice has to be confirmed from Supplier/contractor]

ಮುಂದಿನ ದಿನಗಳಲ್ಲಿ ಖರೀದಿ/ಕಾರ್ಯ ಆದೇಶ ಹಾಗೂ ಹುಂಡಿ ಪಾವತಿ ಸಂಬಂಧ ಮೇಲೆ ವಿವರಿಸಿದಂತೆ ಕ್ರಮವಹಿಸಲು ಸೂಚಿಸಿದೆ.

ಮುಖ್ಯ ಆರ್ಥಿಕ ಅಧಿಕಾರಿ.

**ಪ್ರತಿಗಳು:-**

- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ. ಪ) ಚಾವಿಸನಿನಿ, ನಿಗಮ ಕಛೇರಿ, ಮೈಸೂರು ರವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.
- ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಕಾ ಮತ್ತು ಪಾ ವಲಯ ಕಛೇರಿ, ಮೈಸೂರು/ಹಾಸನ ರವರ ಮಾಹಿತಿಗಾಗಿ.
- ನಿಯಂತ್ರಣಾಧಿಕಾರಿಗಳು ವಲಯ ಕಛೇರಿ, ಮೈಸೂರು/ಹಾಸನ, ರವರ ಮಾಹಿತಿಗಾಗಿ.
- ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ ಕಛೇರಿ, ಮೈಸೂರು/ಮಂಡ್ಯ/ಚಾಮರಾಜನಗರ-ಕೊಡಗು/ ಹಾಸನ, ಚಾವಿಸನಿನಿ.
- ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು ಕಾ ಮತ್ತು ಪಾ ವೃತ್ತ ಕಛೇರಿಗಳು, ಚಾವಿಸನಿನಿ.
- ಉಪ ಪ್ರಧಾನ ವ್ಯವಸ್ಥಾಪಕರು (ಎಮ್.ಐ.ಎಸ್), ನಿಗಮದ ಅಧಿಕೃತ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು.
- ಆಪ್ತ ಕಾರ್ಯದರ್ಶಿ, ವ್ಯನಿ/ನಿ(ತಾಂ)/ಮುಆಅ.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾವಿಸನಿನಿ. ತಮ್ಮ ಅಧೀನ ಕಛೇರಿಗಳಗೆ ಸದರಿ ಸುತ್ತೋಲೆಯನ್ನು ರವಾನಿಸತಕ್ಕದ್ದು.
- ಎಲ್ಲಾ ಲೆಕ್ಕಾಧಿಕಾರಿಗಳು, ಕಾರ್ಯ ಮತ್ತು ಪಾಲನೆ, ವಿಭಾಗಗಳು, ಚಾವಿಸನಿನಿ.
- ಎಲ್ಲಾ ಲೆಕ್ಕಾಧಿಕಾರಿಗಳು (ಆಂ ಪ) ಕಾ ಮತ್ತು ಪಾ, ವಿಭಾಗಗಳು/ವೃತ್ತಗಳು, ಚಾವಿಸನಿನಿ.
- ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆಂ ನಿ) ನಿಗಮ ಕಛೇರಿ, ಚಾವಿಸನಿನಿ. ಮೈಸೂರು
- ಮು.ಕ.

ನೋಂದಾಯಿತ ಕಛೇರಿ: ನಿಗಮ ಕಾರ್ಯಾಲಯ, ನಂ.29, ವಿಜಯನಗರ, 2ನೇ ಹಂತ, ಹಿನಕಲ್, ಮೈಸೂರು-570017
Registered Office: Corporate Office, #29, Vijayanagara, 2nd Stage, Hinkal, Mysuru-570017